'ಸ್ಟೇನ್‌ಲೆಸ್' ಸ್ಟೀಲ್ ಪಾತ್ರೆಗಳು — ವಸುಧೇಂದ್ರ

I. ಅರ್ಥ ಬರೆಯಿರಿ (Write Meanings)

ಮೋಹ, ದುಬಾರಿ, ಪತ್ರಾಳಿ, ಬಾಲಂಗೋಚಿ, ತಳ್ಳಿಹಾಕು, ಗುಮಾಸ್ತ, ಉದ್ರಿ, ಪರ್ಯಾಯ

II. ಪ್ರಶ್ನೆಗಳು (Questions)

೧. ಲೇಪಾಕ್ಷಿ ತಟ್ಟೆ ಬಗ್ಗೆ ಲೇಖಕರ ಅಮ್ಮನಿಗಿದ್ದ ಹೆಮ್ಮೆ ಎಂತಹುದು?

೨. ಲೇಖಕರ ಅಮ್ಮನ ಸ್ಟೀಲ್ ಪಾತ್ರೆಯ ವ್ಯಾಮೋಹದ ಬಗ್ಗೆ ಬರೆಯಿರಿ.

೩. ಲೇಖಕ ವಸುಧೇಂದ್ರರನ್ನು ಸಂಕ್ಷಿಪ್ತವಾಗಿ ಪರಿಚಯಿಸಿ.

೪. ಲೇಖಕರ ಮನೆಗೆ ಮೊದಲ ಸ್ಟೀಲ್ ಪಾತ್ರೆ ಬಂದ ಸಂದರ್ಭವನ್ನು ವರ್ಣಿಸಿ.

೫. ಲೇಖಕರ ಅಮ್ಮ ಸ್ಟೀಲ್ ಪಾತ್ರೆಗಳನ್ನು ಹೇಗೆ ಕಾಪಾಡುತ್ತಿದ್ದರು?

೬. ಲೇಖಕರು ಮನೆ ತುಂಬಿದ ವಿಧ ವಿಧವಾದ ಸ್ಟೀಲ್ ಪಾತ್ರೆಗಳನ್ನು ಪರಿಚಯಿಸಿ.

೭. ಲೇಖಕರಿಂದ ಅವರ ತಾಯಿ ಏನೆಂದು ಮಾತು ತೆಗೆದುಕೊಂಡರು? ಕಾರಣವೇನು?

೮. ಲೇಖಕರ ಅಮ್ಮ ಮಾಡಿದ ನಿರ್ಧಾರವೇನು? ಏಕೆ?

೯. ಲೇಖಕರ ನಾಮಕರಣದಲ್ಲಿ ಕೊಟ್ಟ ಸ್ಟೀಲ್ ಲೋಟ ಒಂದು ಹೇಗೆ ಕಳೆದುಹೋಯಿತು? ಸಂಕ್ಷಿಪ್ತವಾಗಿ ವಿವರಿಸಿ.

೧೦. ನರಸಕ್ಕ ಯಾರು? ಲೇಖಕರ ತಾಯಿ ಪ್ರಮಾಣ ಮಾಡಿದ್ದು ಯಾಕೆ? ಸನ್ನಿವೇಶವೇನು?

೧೧. ಅಕ್ಕನ ಮದುವೆಯಲ್ಲಿ ಉಡುಗೊರೆಯಾಗಿ ಬಂದಿದ್ದ ಸ್ಟೀಲ್ ಪಾತ್ರೆಗಳನ್ನು ಲೇಖಕರು ಕಳೆದುಕೊಂಡಿದ್ದು ಹೇಗೆ?

೧೨. ದುಃಖದ ಸಂದರ್ಭದಲ್ಲಿ ತಮಾಷೆಯಾಗಿ ಕಂಡ ಸಂಗತಿ ಯಾವುದು?

೧೩. ಲೇಖಕರ ಮನೆಯಲ್ಲಿ ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳ ಮಹತ್ವ ಹೇಗೆ ಕಡಿಮೆಯಾಯಿತು?

೧೪. 'ನನಗೂ ಅವನಷ್ಟು ಸಂಬಳ ಬಂದಿದ್ದರೆ ಸ್ಟೀಲ್ ಅಂಗಡಿನೇ ಕೊಂಡು ನಿನ್ನ ಮುಂದೆ ಸುರಿತಿದ್ದೆ' ಈ ಮಾತನ್ನು ಯಾರು ಹೇಳಿದರು? ಹಿನ್ನೆಲೆಯನ್ನು ಬರೆಯಿರಿ.

೧೫. ಅಮ್ಮನ ಸ್ಟೀಲ್ ಪಾತ್ರೆಗಳ ಗತಿ ಏನಾಯಿತು?

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:

"ಅಪ್ಪನ ಮನೆಯಲ್ಲೇ ಊಟಕ್ಕೆ ಮುತ್ತುಗದ ಎಲೆಯ ಪತ್ರಾಳಿ ಹಾಕುತ್ತಿದ್ದರಂತೆ. ತುಪ್ಪ ಬಡಿಸ ಬೇಕಾದರೂ ಒಂದು ಪುಟ್ಟ ಚಮಚವಿರಲಿಲ್ಲ. ಹಿತ್ತಲಲ್ಲಿದ್ದ ಮಾವಿನ ಎಲೆಯೊಂದನ್ನು ಕಿತ್ತು ಅದನ್ನೇ ಸುರುಳಿ ಸುತ್ತಿ ಉಪಯೋಗಿಸುತ್ತಿದ್ದರಂತೆ." ('ಸ್ಟೀಲ್ ಲೆಸ್' ಸ್ಟೀಲ್ ಪಾತ್ರೆಗಳು)

೧೬. ಲೇಖಕರ ಅಮ್ಮನಿಗೆ ಯಾವುದರ ಬಗ್ಗೆ ವಿಶೇಷ ಆಕರ್ಷಣೆ ಇತ್ತು? ವಿವರಿಸಿ. (2)

೧೭. ಲೇಖಕರು ತಮ್ಮ ಪಾತ್ರೆಗಳ ಡಬ್ಬವನ್ನು ಕಳೆದುಕೊಂಡ ಸಂದರ್ಭವನ್ನು ವರ್ಣಿಸಿ. (3)

೧೮. "ನೀನು ದೊಡ್ಡವನಾಗಿ ಕೆಲಸಕ್ಕೆ ಸೇರಿದ ಮೇಲೆ ನಾನು ಕೇಳಿದಷ್ಟು ಸ್ಟೀಲ್ ಪಾತ್ರೆಗಳನ್ನು ಕೊಡಿಸುತ್ತೀಯಾ?" ಅಂತ ಕೇಳಿ ಮಾತು ತೆಗೆದುಕೊಂಡವರು ಯಾರು? ಸಂದರ್ಭವೇನು? (3)

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

೧೯. ಲೇಖಕ ಅಮ್ಮನ ಮುಖದಲ್ಲಿ ಹತ್ತಿಕ್ಕಲಾರದ ಹೆಮ್ಮೆಯ ಭಾವ ಬಂದ ಸಂದರ್ಭವನ್ನು ವರ್ಣಿಸಿ. (2)

ಗದ್ಯಭಾಗವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ:

"ಅಮ್ಮನಿಗೆ ಬೆಳ್ಳಿ ಬಂಗಾರದ ಮೇಲೆ ಅಂತಹ ಮೋಹವಿರಲಿಲ್ಲ. 'ತುಗೋಳ್ಳಕ್ಕೆ ಅಗದಕ್ಕೆ ಆಸೆ ಮಾಡಿ ಏನುಪಯೋಗ' ಅಂತ ತಳ್ಳಿ ಹಾಕಿ ಬಿಡುತ್ತಿತ್ತು. ಇನ್ನು ಹೊಸ ಬಟ್ಟೆಗಳ ಬಗ್ಗೆಯೂ ಅಂತಹ ವ್ಯಾಮೋಹವಿರಲಿಲ್ಲ. ವರ್ಷಕ್ಕೊಮ್ಮೆ ದೀಪಾವಳಿಗೋ, ತಪ್ಪಿದರೆ ಯುಗಾದಿಗೋ ಒಂದು ಸೀರೆ ಮಾತ್ರ ಅಪ್ಪ ಕೊಡಿಸುತ್ತಿದ್ದುದು. ಗುಮಾಸ್ತನ ಸಂಬಳದಲ್ಲಿ ಅಪ್ಪ ಅದನ್ನು ತರುವುದಕ್ಕೆ ಉದ್ರಿ ಬರೆಸುತ್ತಿದ್ದ."— ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳು – ವಸುಧೇಂದ್ರ

೨೦. ವೇಣು ಯಾರು? ಅವನು ತಿರುಪತಿಗೆ ಹೋಗುವಾಗ ಮಾಡಿದ ತಪ್ಪು ಯಾವುದು? ತಿಳಿಸಿ.
೨೧. ಈ ಮನೆಯ ತುಂಬಾ ಸ್ಟೀಲ್ ಪಾತ್ರೆಗಳು ಥಳ ಥಳ ಹೊಳೆಯುವಂತೆ ಮಾಡದಿದ್ದರೆ ನಾನು ಬಳ್ಳಾರಿ ಹೆಣ್ಣೆ ಅಲ್ಲ ಅಂತ ಅಮ್ಮ ನಿರ್ಧರಿಸಿದ್ದು ಏಕೆ?
೨೨. ಅಕ್ಕನ ಮದುವೆಯಲ್ಲಿ ಉಡುಗೊರೆಯಾಗಿ ಬಂದ ಸ್ಟೀಲ್ ಪಾತ್ರೆಗಳನ್ನು ಲೇಖಕರು ಹೇಗೆ ಕಳೆದುಕೊಂಡರು?
೨೩. ಯಾವುದನ್ನು ನೋಡಿ ಅಮ್ಮನಿಗೆ ಕಣ್ಣಲ್ಲಿ ನೀರು ಬಂತು? ವಿವರಿಸಿ.

ಅನಂತರ ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:

"ಸಾಕಷ್ಟು ಸ್ಟೀಲ್ ಪಾತ್ರೆಗಳು ಒಂದೊಂದಾಗಿ ಮನೆಗೆ ಪ್ರವೇಶಪಡೆದವು..... ನಂತರ ನಿಧಾನಕ್ಕೆ ಯಾರು ಊಹಿಸಲಾರದ ವಿಶೇಷ ವಸ್ತುಗಳು ಸ್ಟೀಲ್ ಪಾತ್ರೆಗಳಾಗಿ ಬಂದವು."'ಸ್ಟೇನ್‌ಲೆಸ್' ಸ್ಟೀಲ್ ಪಾತ್ರೆಗಳು – ವಸುಧೇಂದ್ರ

೨೪. ವಸುಧೇಂದ್ರರ ಕಾಲ ಸ್ಥಳ ಪ್ರಶಸ್ತಿ ಮತ್ತು ಆಸಕ್ತಿಯ ಬಗ್ಗೆ ವಿವರಿಸಿ. [2]
೨೫. "ನಾನು ಕಳ್ಳ ಅಲ್ಲಮ್ಮೋ... ನನ್ನ ಮನೆಗೆ ಮಡಿಕೆ – ಕುಡಿಕೆ ಬಟ್ಟರೆ ಬೇರೆ ಏನೂ ಇಲ್ಲ" ಸಂದರ್ಭ ವಿವರಿಸಿ.
೨೬. ".....ನಾನು ಕೇಳಿದಷ್ಟು ಸ್ಟೀಲ್ ಪಾತ್ರೆ ಕೊಡಿಸಿಯಾ?" ಎಂದು ಅಮ್ಮ ಕೇಳಲು ಕಾರಣವೇನು? [3]
೨೭. ಸ್ಟೀಲ್ ಪಾತ್ರೆ ಬೆಲೆ ಕಡಿಮೆಯಾಯಿತೋ, ಜನರ ಸಂಬಳ ಹೆಚ್ಚಾಯಿತೋ ಗೊತ್ತಿಲ್ಲ ಎಂದು ಲೇಖಕರು ಹೇಳಲು ಕಾರಣವೇನು? [2]

III. ಸಮಾನಾರ್ಥಕ ಪದಗಳನ್ನು ಬರೆಯಿರಿ (Write Synonyms)

ಗುಮಾಸ್ತ, ಜತನ, ನಿಧನ, ಪತ್ರಾಳಿ, ಬಾಲಂಗೋಚಿ

IV. ವಿರುದ್ಧಾರ್ಥಕ ಪದಗಳನ್ನು ಬರೆಯಿರಿ (Write Antonyms)

ದುಬಾರಿ, ಹಳೆಯ, ದುಃಖ, ಕಡಿಮೆ, ಒಳಗೆ, ಬಡತನ, ಹೊಳೆಯುವ, ನಂಬಿಕೆ, ಕಷ್ಟ, ಮರಣ, ವೇಗ, ದೊಡ್ಡದು, ಪ್ರೀತಿ

FOR KANNADA